O.S .No. 12/2012
PW-1

ದಿನಾಂಕ: 12.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಪಿ.ಎಂ.ಹೆಚ್. ವಕೀಲರಿಂದಃ

ನಾನು ಅನಕ್ಷರಸ್ಥ. ನೀವು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ಯಾವ ದಾಖಲೆಗಳು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎಂಬ ಬಗ್ಗೆ ತಿಳುವಳಿಕೆ ಇದೆ ಎಂದರೆ ಸರಿ. ಸ.ನಂ. 192 ರಲ್ಲಿ ಒಟ್ಟು ಎಷ್ಟು ಜಮೀನು ಇದೆ ಎಂದರೆ ಸಾಕ್ಷಿ ಹನ್ನೊಂದುವರೆ ಗುಂಟೆ ಎಂದು ಹೇಳುತ್ತಾರೆ. ಬೊರೇಗೌಡ @ಹೊಟ್ಟೇಗೌಡ ಬಿನ್ ತಿಮ್ಮೇಗೌಡ ಎಂದರೆ ಯಾರು ಎಂದರೆ ಸಾಕ್ಷಿ ನನ್ನ ತಾತ ಬೋರೇಗೌಡ ಎಂದು ಹೇಳುತ್ತಾರೆ. ನನ್ನ ಅಜ್ಜಿ ಹೆಸರು ನಿಂಗಮ್ಮ. ನಿಮ್ಮ ತಾತ ಬೋರೇಗೌಡರ ಮಕ್ಕಳೇ ನಿಮ್ಮ ತಂದೆ ಕೃಷ್ಣೇಗೌಡ ಹಾಗೂ ಪುಟ್ಟಮ್ಮ ಎಂದರೆ ಸರಿ. ಪುಟ್ಟಮ್ಮ ರವರ ಮಗಳು ಈ ದಾವೆಯ ಪ್ರತಿವಾದಿ ಎಂದರೆ ಸರಿ. ಪುಟ್ಟಮ್ಮ ರವರಿಗೆ ದಾವಾ ಆಸ್ತಿಯಲ್ಲಿ ಪಾಲು ಕೊಟ್ಟಿಲ್ಲ ಎಂದರೆ ಸಾಕ್ಷಿ ತಾತನ ಆಸ್ತಿ, ಕೊಟ್ಟಿದ್ದಾರೋ, ಇಲ್ಲವೋ ಗೊತ್ತಿಲ್ಲ ಎಂದು ಹೇಳುತ್ತಾರೆ.

ನಿಪಿ-11 ರಂತೆ ನಿಮ್ಮ ತಾತ ಬೋರೇಗೌಡರಿಗೆ ಸೇರಿದ 3 ಆಸ್ತಿಗಳ ಸಂಬಂಧಿಸಿದ ದಾಖಲೆಗಳನ್ನು ಕೊಟ್ಟಿರುತ್ತೀರಿ ಎಂದರೆ ಸರಿ. ಸದರಿ 3 ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

ನಿಪಿ-5 ರಂತೆ 1980-81 ರಲ್ಲಿ ನಿಂಗಮ್ಮ ಕೋಂ ಬೋರೇಗೌಡ ರವರ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ನಿಪಿ-3 ರಂತೆ ನಿಂಗಮ್ಮ ರವರ ಹೆಸರಿಗೆಯಾದ ಖಾತೆಯನ್ನು ರದ್ದು ಮಾಡಿ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಲಾಗಿದೆ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ನಿಂಗಮ್ಮ ರವರು ದಾವಾ ಆಸ್ತಿಯನ್ನು ತನ್ನ ಮೊಮ್ಮಗಳಿಗೆ ಖಾತೆ ಮಾಡುವ ಉದ್ದೇಶದಿಂದ ನಿಂಗಮ್ಮ ರವರ ಸಮಕ್ಷಮ ಖಾತೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-3 ರಂತೆ ಖಾತೆಯಾದಾಗಿನಿಂದ ಇಲ್ಲಿಯವರೆಗೂ ಪ್ರತಿವಾದಿಯೇ ದಾವಾ ಆಸ್ತಿಯ ಮಾಲೀಕರಾಗಿ ಅನುಭವ ಮಾಡುತ್ತಿದ್ದಾರೆಂದರೆ ಸರಿಯಲ್ಲ. ಇಲ್ಲಿಯವರೆಗೂ ಪ್ರತಿವಾದಿಯೇ ಕಂದಾಯ ಪಾವತಿ ಮಾಡುತ್ತಿದ್ದಾರೆಂದರೆ ಸರಿಯಲ್ಲ. ನಿಪಿ-3 ರಂತೆ ಪ್ರತಿವಾದಿಯ ಹೆಸರಿಗೆ ಖಾತೆ ಮಾಡುವ ಕಾಲಕ್ಕೆ ನಿಮ್ಮ ತಂದೆ ಕೃಷ್ಣೇಗೌಡ, ಅತ್ತೆ ಪುಟ್ಟಮ್ಮ, ಅಜ್ಜಿ ನಿಂಗಮ್ಮ ರವರುಗಳ ಹೇಳಿಕೆ ಮೇರೆಗೆ ಖಾತೆ ಮಾಡಲಾಗಿರುತ್ತದೆಂದರೆ ಸಾಕ್ಷಿ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ಪ್ರತಿವಾದಿಗೂ ಭಾಗದ

ಹಕ್ಕು ಇದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿ ಬದುಕಿದ್ದಾರೆಂದರೆ ಸರಿ. ಪುಟ್ಟಮ್ಮ ದಾವಾ ಆಸ್ತಿಯಲ್ಲಿ ಬರಬೇಕಾದ ಪಾಲನ್ನು ತನ್ನ ಮಗಳಾದ ಪ್ರತಿವಾದಿಗೆ ನೀಡಬೇಕೆಂದು ಒಪ್ಪಿಗೆ ಸೂಚಿಸಿರುತ್ತಾರೆಂದರೆ ಸುಳ್ಳು. ನಿಮ್ಮ ತಂದೆ 2008 ರಲ್ಲಿ ಮೃತಪಟ್ಟಿರುತ್ತಾರೆಂದರೆ ಸರಿ. ನಿಮ್ಮ ತಂದೆ ಬದುಕಿರುವಾಗ ನಿಪಿ-3 ರಂತೆ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಲಾದ ಆಸ್ತಿಯ ಬಗ್ಗೆ ಯಾವುದೇ ತಂಟೆ ತಕರಾರು ಮಾಡಿರಲಿಲ್ಲ ಎಂದರೆ ಸುಳ್ಳು. ನಿಪಿ-3 ರಂತೆ ಪ್ರತಿವಾದಿಯ ಹೆಸರಿಗಾದ ಖಾತೆಯನ್ನು ನಿಮ್ಮ ತಂದೆ ಯಾವುದಾದರೂ ಪ್ರಾಧಿಕಾರದ ಮುಂದೆ ಪ್ರಶ್ನಿಸಿದ್ದರಾ ಎಂದರೆ ಸಾಕ್ಷಿ ಇಲ್ಲೇ ಸಿವಿಲ್ ನ್ಯಾಯಾಲಯ ಹಾಗೂ ತಾಲ್ಲೂಕು ಕಚೇರಿಯಲ್ಲಿ ಎಂದು ಹೇಳುತ್ತಾರೆ. ತಾಲ್ಲೂಕು ಕಚೇರಿಯಲ್ಲಿ ನಿಮ್ಮ ತಂದೆ ಕೃಷ್ಣೇಗೌಡ ನಿಪಿ-3 ರಂತೆ ಖಾತೆಯಾದ ಬಗ್ಗೆ ತಕರಾರು ಸಲ್ಲಿಸಿದ್ದರಾ ಎಂದರೆ ಸಾಕ್ಷಿ ಸಲ್ಲಿಸಿದ್ದರು ಎಂದು ಹೇಳುತ್ತಾರೆ. ನಿಮ್ಮ ತಂದೆ ಕೃಷ್ಣೇಗೌಡ ಯಾವುದೇ ತಂಟೆ ತಕರಾರು ಮಾಡಿಲ್ಲದೇ ಇದ್ದರೂ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪ್ರತಿವಾದಿಗೆ ಗಂಡ, ಮಕ್ಕಳು ಇಲ್ಲ ಎಂದರೆ ಸರಿ. ಪ್ರತಿವಾದಿಯಿಂದ ದಾವಾ ಆಸ್ತಿಯನ್ನು ಲಟಪಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೀರಾ ಎಂದರೆ ಸರಿಯಲ್ಲ. ನಿಪಿ-3 ರಂತೆ ಖಾತೆಯಾದಾಗಿನಿಂದ ಇಲ್ಲಿಯವರೆಗೂ ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿ ತನ್ನ ಜಮೀನಿನ ಉಳುಮೆಯನ್ನು ತನ್ನ ತಮ್ಮನ ಸಹಾಯದಿಂದ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ನಿಮ್ಮ ತಂದೆಗೆ ಸಂಬಂಧಿಸಿದ ಬೇರೆ ಆಸ್ತಿಗಳನ್ನು ಮಾರಾಟ ಮಾಡಿರುತ್ತೀರಿ ಎಂದರೆ ಸುಳ್ಳು. ಪ್ರತಿವಾದಿ ದಾವೆ ಹೂಡಿದ ನಂತರ ದಾವಾ ಆಸ್ತಿಯನ್ನು ಮಾರಾಟ ಮಾಡದಂತೆ ನಿಮಗೆ ವಕೀಲರಿಂದ ನೋಟೀಸ್ ಕೊಡಿಸಿರುತ್ತಾರೆಂದರೆ ಸುಳ್ಳು. ದಾವಾ ಆಸ್ತಿಯನ್ನು ನೀವಾಗಲೀ, ಪ್ರತಿವಾದಿಯಾಗಲೀ ಮಾರಾಟ ಮಾಡಬಾರದು ಎಂಬ ವಿಚಾರ ನಿಮ್ಮ ತಿಳುವಳಿಕೆಯಲ್ಲಿ ಇದೆ ಎಂದರೆ ಸಾಕ್ಷಿ ಮಾರಾಟ ಮಾಡುತ್ತಿಲ್ಲ ಎಂದು ಹೇಳುತ್ತಾರೆ. ನೀವು ಹಾಜರುಪಡಿಸಿದ ನಿಪಿ-1 ರಿಂದ 12 ದಾಖಲಾತಿಗಳಿಗೂ ಹಾಗೂ ನಿಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಿಮಗೆ ಯಾವುದೇ ಹಕ್ಕು, ಅಧಿಕಾರ ಇಲ್ಲ, ಪ್ರತಿವಾದಿಯೇ ದಾವಾ ಆಸ್ತಿಯ ಮಾಲೀಕರು ಎಂದರೆ ಸರಿಯಲ್ಲ.

ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ತಿಳಿದುಕೊಂಡಿರುತ್ತೇನೆ. ಅದನ್ನು ನಾನೇ ಹೇಳಿ ಬರೆಸಿರುತ್ತೇನೆ. ನ್ಯಾಯಾಲಯದ ಮುಂದೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೀರಾ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.